# ಡಿ.23, 24: ಜಾಗತಿಕ ಸಮ್ಮೇಳನ

**ಪತ್ರಿಕಾಭವನ, ಡಿ. 20:** ಎನ್‌ಐಟಿಕೆ ಸುರತ್ಕಲ್‌ನ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ 14ನೇ ಜಾಗತಿಕ ಸಮ್ಮೇಳನ ಡಿ. 23, 24ರಂದು ಎನ್‌ಐಟಿಕೆ ಸುರತ್ಕಲ್ ಕ್ಯಾಂಪಸ್‌ನಲ್ಲಿರುವ ಸಿಲ್ವರ್ ಜುಬಿಲಿ ಆಡಿಟೋರಿಯಂನಲ್ಲಿ ಜರಗಲಿದೆ.

ಸಂಘದ ವಜ್ರ ಮಹೋತ್ಸವದ ಪ್ರಯುಕ್ತ ಈ ಸಮ್ಮೇಳನ ಆಯೋಜಿಸಲಾಗಿದ್ದು, 600 ಮಂದಿ ಪ್ರತಿನಿಧಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಪ್ರೊ| ತ್ರಿಲೋಚನ್ ಶಾಸ್ತ್ರಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದು, ಡಿ. 23ರಂದು ಬೆಳಗ್ಗೆ 10.15ಕ್ಕೆ ಉದ್ಘಾಟನೆ ನಡೆಯಲಿದೆ. ಸಂಘದ ಜಾಗತಿಕ ಅಧ್ಯಕ್ಷ ಕೀರ್ತಿರಾಜ್ ಸಾಲ್ಯಾನ್ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ 1965ನೇ ಪ್ರಥಮ ಬ್ಯಾಚ್‌ನ ಪದವೀಧರರು ಸಹಿತ ಹಲವರನ್ನು ಸಮ್ಮಾನಿಸಲಾಗುವುದು. ಡಿ. 24ರಂದು ಸಂಜೆ 4 ಗಂಟೆಗೆ ಸಮಾರೋಪ ನಡೆಯಲಿದೆ. ವಿಚಾರ ಮಂಡನೆ, ಗುಂಪು ಚರ್ಚೆ ನಡೆಯಲಿದೆ ಎಂದು ಸಮ್ಮೇಳನದ ಸಂಚಾಲಕ ವಿಟ್ಠಲ್ ಬಿ. ಪರ್ವತೀಕರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಎನ್‌ಐಟಿಕೆ ಹಳೆ ವಿದ್ಯಾರ್ಥಿಗಳಾದ ಅಜಿತ್ ಕರ್ವಾಕರ್, ವಿಷ್ಣುದಾಸ್ ಪೈ, ಎನ್‌ಐಟಿಕೆಯ ಪ್ರೊ| ಅರುಣ್ ಎಂ. ಇಸ್ಲೂರ್, ಸಾರ್ವಜನಿಕ ಸಂಪರ್ಕ ಅಧಿಕಾರಿ ವೈಷ್ಣವಿ ಉಪಸ್ಥಿತರಿದ್ದರು.

Udayavani, Date:21/12/22, p.no- Sudin -03